ಸೂ. 88 | **38. ಸ್ವಾದ್** | ರು. 5

اٰيَاتُهَا ٨٨ سُوْرَةُ صٓ مَكِّيَّةٌ رُكُوْعَاتُهَا ٥

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಸ್ವಾದ್. ಉಪದೇಶ ಭರಿತವಾದ ಕುರ್‌ಆನಿನಾಣೆ.

صٓ وَالْقُرْاٰنِ ذِی الذِّكْرِ ۟ؕ ①

2. ನಿಜವಾಗಿ, ಸತ್ಯವನ್ನು ತಿರಸ್ಕರಿಸಿದ ಈ ಜನರೇ ತೀವ್ರ ಅಹಂಕಾರ ಮತ್ತು ಹಟಮಾರಿತನದಲ್ಲಿ ಸಿಕ್ಕಿ ಬಿದ್ದಿದ್ದಾರೆ.[1]

بَلِ الَّذِیْنَ كَفَرُوْا فِیْ عِزَّةٍ وَّشِقَاقٍ ②

3. ನಾವು ಇವರಿಗಿಂತ ಮುಂಚೆ ಇಂತಹ ಎಷ್ಟೋ ಜನಾಂಗಗಳನ್ನು ನಾಶಗೊಳಿಸಿದ್ದೇವೆ. (ದುರ್ಗತಿ ಬಂದಾಗ) ಅವರು ಗೋಳಿಟ್ಟಿದ್ದಾರೆ. ಆದರೆ ಅದು ಪಾರಾಗುವ ಸಮಯವಾಗಿರುವುದಿಲ್ಲ.

كَمْ اَهْلَكْنَا مِنْ قَبْلِهِمْ مِّنْ قَرْنٍ فَنَادَوْا وَّلَاتَ حِیْنَ مَنَاصٍ ③

4. ಓರ್ವ ಎಚ್ಚರಿಕೆ ನೀಡುವಾತನು ಸ್ವತಃ ಇವರೊಳಗಿಂದಲೇ ಬಂದು ಬಿಟ್ಟ ಕುರಿತು ಇವರಿಗೆ ಅತ್ಯಾಶ್ಚರ್ಯವಾಯಿತು. ಸತ್ಯ ನಿಷೇಧಿಗಳು, "ಇವನೊಬ್ಬ ಜಾದುಗಾರ, ಮಹಾ ಸುಳ್ಳುಗಾರ,

وَعَجِبُوْۤا اَنْ جَآءَهُمْ مُّنْذِرٌ مِّنْهُمْ ؗ وَقَالَ الْكٰفِرُوْنَ هٰذَا سٰحِرٌ كَذَّابٌ ۖۚ ④

5. ಇವನು ಎಲ್ಲ ದೇವರುಗಳ ಸ್ಥಾನದಲ್ಲಿ ಕೇವಲ ಒಬ್ಬನೇ ದೇವನನ್ನು ಮಾಡಿಬಿಟ್ಟನೇ? ನಿಜಕ್ಕೂ ಇದೊಂದು ಬಹಳ ವಿಚಿತ್ರ ಸಂಗತಿ" ಎಂದು ಹೇಳತೊಡಗಿದರು.

اَجَعَلَ الْاٰلِهَةَ اِلٰهًا وَّاحِدًا ۖۚ اِنَّ هٰذَا لَشَیْءٌ عُجَابٌ ⑤

6. ಜನಾಂಗದ ಸರದಾರರು ಹೀಗೆ ಹೇಳುತ್ತ ಹೊರ ನಡೆದು ಬಿಟ್ಟರು; "ಹೊರಡಿರಿ ಮತ್ತು ನಿಮ್ಮ ಆರಾಧ್ಯರ ಆರಾಧನೆಯಲ್ಲೇ ಸ್ಥಿರವಾಗಿ ನಿಲ್ಲಿರಿ. ಈ ಮಾತನ್ನು ಯಾವುದೋ ಬೇರೆಯೇ ಉದ್ದೇಶದಿಂದ ಹೇಳಲಾಗುತ್ತಿದೆ.[2]

وَانْطَلَقَ الْمَلَاُ مِنْهُمْ اَنِ امْشُوْا وَاصْبِرُوْا عَلٰۤی اٰلِهَتِكُمْ ۖۚ اِنَّ هٰذَا لَشَیْءٌ یُّرَادُ ۚ ⑥

---

1. ಅರ್ಥಾತ್- ಸತ್ಯನಿಷೇಧಿಗಳ ನಿರಾಕರಣೆಗೆ ಕಾರಣ ಅವರ ಮುಂದೆ ಸಮರ್ಪಿಸಲಾಗುತ್ತಿರುವ ಧರ್ಮದಲ್ಲೇ ಯಾವುದೋ ದೋಷವಿದೆ ಎಂದಲ್ಲ. ಬದಲಾಗಿ ಕೃತಕ ಜಂಭ, ಅಜ್ಞಾನಜನ್ಯ ದುರಹಂಕಾರ ಮತ್ತು ಹಟಮಾರಿತನ ಮಾತ್ರ ಅದಕ್ಕೆ ಕಾರಣವಾಗಿದೆ.
2. ಇದರಲ್ಲೇನೋ ಮೋಸವಿದೆ ಎಂಬುದು ಅವರ ಭಾವನೆಯಾಗಿತ್ತು. ನಾವೆಲ್ಲರೂ ಮುಹಮ್ಮದ್‌ರ(ಸ) ಅಧೀನರಾಗಿ ಅವರು ನಮ್ಮ ಮೇಲೆ ಆಡಳಿತ ನಡೆಸುವಂತಾಗಬೇಕೆಂಬ ಉದ್ದೇಶದಿಂದ ಈ ಸಂದೇಶ ನೀಡಲಾಗುತ್ತಿದೆ ಎಂದು ಅವರು ಭಾವಿಸಿದ್ದರು.

مَا سَمِعْنَا بِهَٰذَا فِي الْمِلَّةِ الْآخِرَةِ إِنْ هَٰذَا إِلَّا اخْتِلَاقٌ ﴿٧﴾

7. ಈ ಮಾತನ್ನು ನಾವು ಇತ್ತೀಚಿನ ಕಾಲದ ಜನಾಂಗಗಳ ಪೈಕಿ ಯಾರಿಂದಲೂ ಕೇಳಿಲ್ಲ. ಇದು ಕೇವಲ ಒಂದು ಕಪೋಲಕಲ್ಪಿತ ವಿಷಯವಾಗಿದೆ.

أَأُنزِلَ عَلَيْهِ الذِّكْرُ مِن بَيْنِنَا ۚ بَلْ هُمْ فِي شَكٍّ مِّن ذِكْرِي ۖ بَل لَّمَّا يَذُوقُوا عَذَابِ ﴿٨﴾

8. ಅಲ್ಲಾಹನ ಬೋಧನೆಯು ಅವತೀರ್ಣಗೊಳ್ಳುವುದಕ್ಕೆ ನಮ್ಮ ನಡುವೆ ಕೇವಲ ಈತನೊಬ್ಬನೇ ಉಳಿದು ಸಿಕ್ಕಿದನೇ?" ವಾಸ್ತವದಲ್ಲಿ ನನ್ನ ಬೋಧನೆಯ ವಿಷಯದಲ್ಲಿ ಇವರು ಸಂಶಯಗ್ರಸ್ತರಾಗಿದ್ದಾರೆ.[3] ಇವರು ಈ ತನಕ ನನ್ನ ಯಾತನೆಯ ರುಚಿಯನ್ನು ಸವಿಯದಿರುವುದರಿಂದ ಹೀಗೆಲ್ಲ ಹೇಳುತ್ತಿದ್ದಾರೆ.

أَمْ عِندَهُمْ خَزَائِنُ رَحْمَةِ رَبِّكَ الْعَزِيزِ الْوَهَّابِ ﴿٩﴾

9. ಪ್ರಬಲನೂ ಮಹಾದಾನಿಯೂ ಆಗಿರುವ ನಿಮ್ಮ ಪ್ರಭುವಿನ ಕೃಪೆಯ ಭಂಡಾರಗಳು ಇವರ ಕೈಯಲ್ಲಿವೆಯೇ?

أَمْ لَهُم مُّلْكُ السَّمَاوَاتِ وَالْأَرْضِ وَمَا بَيْنَهُمَا ۖ فَلْيَرْتَقُوا فِي الْأَسْبَابِ ﴿١٠﴾

10. ಇವರು ಭೂಮಿ-ಆಕಾಶಗಳ ಹಾಗೂ ಅವುಗಳ ನಡುವೆ ಇರುವ ವಸ್ತುಗಳ ಮಾಲಕರೇ? ಹಾಗಿದ್ದರೆ ಇವರು ವಸ್ತುಲೋಕದ ಉನ್ನತಿಗಳಿಗೆ ಏರಿ ನೋಡಲಿ.

جُندٌ مَّا هُنَالِكَ مَهْزُومٌ مِّنَ الْأَحْزَابِ ﴿١١﴾

11. ಇದಂತು ಕೂಟಗಳ ಪೈಕಿ ಒಂದು ಸಣ್ಣ ಕೂಟವಾಗಿದ್ದು ಇಲ್ಲೇ ಸೋಲನ್ನು ಅನುಭವಿಸಲಿದೆ.[4]

كَذَّبَتْ قَبْلَهُمْ قَوْمُ نُوحٍ وَعَادٌ وَفِرْعَوْنُ ذُو الْأَوْتَادِ ﴿١٢﴾
وَثَمُودُ وَقَوْمُ لُوطٍ وَأَصْحَابُ الْأَيْكَةِ ۚ أُولَٰئِكَ الْأَحْزَابُ ﴿١٣﴾

12-13. ಇವರಿಗಿಂತ ಮುಂಚೆ ನೂಹರ ಜನಾಂಗ, ಆದ್, ಮೊಳೆಗಳವನಾದ ಫಿರ್‌ಔನ್, ಸಮೂದ್, ಲೂತ್ ಜನಾಂಗ ಮತ್ತು ಐಕಃದವರು ಸುಳ್ಳಾಗಿಸಿದ್ದಾರೆ. ಅವರು ಕೂಟಗಳಾಗಿದ್ದರು.

إِن كُلٌّ إِلَّا كَذَّبَ الرُّسُلَ فَحَقَّ عِقَابِ ﴿١٤﴾

14. ಅವರ ಪೈಕಿ ಪ್ರತಿಯೊಂದು ಕೂಟವೂ ಸಂದೇಶವಾಹಕರನ್ನು ಸುಳ್ಳಾಗಿಸಿತು ಮತ್ತು ನನ್ನ ಶಿಕ್ಷೆಯ ತೀರ್ಪು ಅವರ ಮೇಲೆ ಎರಗಿಯೇ ಬಿಟ್ಟಿತು.

---

3. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅಲ್ಲಾಹನು ಪ್ರವಾದಿವರ್ಯರೊಡನೆ(ಸ), "ಮುಹಮ್ಮದ್‌ರೇ(ಸ)! ನಿಜವಾಗಿ ಇವರು ನಿಮ್ಮನ್ನು ಸುಳ್ಳಾಗಿಸುತ್ತಿರುವುದಲ್ಲ. ಬದಲಾಗಿ ನನ್ನನ್ನೇ ಸುಳ್ಳಾಗಿಸುತ್ತಿದ್ದಾರೆ. ಅವರಿಗೆ ನಿಮ್ಮ ಸತ್ಯತೆಯ ಬಗ್ಗೆ ಶಂಕೆ ಇರುವುದಲ್ಲ, ಬದಲಾಗಿ ನನ್ನ ಬೋಧನೆಗಳ ಬಗ್ಗೆಯೇ ಶಂಕೆಯಿದೆ" ಎಂದು ಹೇಳುತ್ತಿದ್ದಾನೆ.

4. 'ಇಲ್ಲೇ' ಎನ್ನುವ ಮೂಲಕ 'ಪವಿತ್ರ ಮಕ್ಕಾ ನಗರ'ವನ್ನು ಸೂಚಿಸಲಾಗಿದೆ. ಅರ್ಥಾತ್ ಅವರು ಪರಸ್ಪರ ಮಾತನಾಡಿಕೊಳ್ಳುತ್ತಿರುವ ಈ ಸ್ಥಳದಲ್ಲೇ ಒಂದು ದಿನ ಅವರು ಪರಾಜಯ ಹೊಂದಲಿದ್ದಾರೆ. ಇಂದು ಯಾವ ವ್ಯಕ್ತಿಯನ್ನು ತುಚ್ಛೀಕರಿಸಿ 'ಪ್ರವಾದಿ'ಯೆಂದು ಒಪ್ಪಲು ಇವರು ನಿರಾಕರಿಸುತ್ತಿದ್ದಾರೋ ಅದೇ ವ್ಯಕ್ತಿಯ ಮುಂದೆ ಅವರು ಬಾಡಿದ ಮುಖಹೊತ್ತು ನಿಂತುಕೊಂಡಿರುವ ಸಂದರ್ಭ ಇದೇ ಜಾಗದಲ್ಲಿ ಎದುರಾಗಲಿದೆ.

وَمَا يَنظُرُ هَٰٓؤُلَآءِ إِلَّا صَيْحَةً وَٰحِدَةً
مَّا لَهَا مِن فَوَاقٍ ﴿١٥﴾

15. ಇವರೂ ಒಂದು ಆಸ್ಫೋಟದ ನಿರೀಕ್ಷೆಯಲ್ಲಿದ್ದಾರೆ. ಆ ಬಳಿಕ ಇನ್ನಾವುದೇ ಆಸ್ಫೋಟ ಇರಲಾರದು.

وَقَالُوا۟ رَبَّنَا عَجِّل لَّنَا قِطَّنَا
قَبْلَ يَوْمِ ٱلْحِسَابِ ﴿١٦﴾

16. ಮತ್ತು ಇವರು, "ಓ ನಮ್ಮ ಪ್ರಭೂ, ಲೆಕ್ಕಾಚಾರ ಜರಗುವ ದಿನಕ್ಕಿಂತ ಮುಂಚೆಯೇ ನಮ್ಮ ಪಾಲು ನಮಗೆ ಬೇಗನೆ ಕೊಟ್ಟುಬಿಡು" ಎನ್ನುತ್ತಾರೆ.

ٱصْبِرْ عَلَىٰ مَا يَقُولُونَ وَٱذْكُرْ عَبْدَنَا
دَاوُۥدَ ذَا ٱلْأَيْدِ ۖ إِنَّهُۥٓ أَوَّابٌ ﴿١٧﴾

17. ಸಂದೇಶವಾಹಕರೇ, ಇವರು ಹೇಳುವ ಮಾತುಗಳನ್ನು ಸಹಿಸಿಕೊಳ್ಳಿರಿ ಮತ್ತು ಇವರಿಗೆ ನಮ್ಮ ದಾಸ ದಾವೂದರ ವೃತ್ತಾಂತವನ್ನು ವಿವರಿಸಿರಿ. ಅವರು ಮಹಾಶಕ್ತಿಗಳನ್ನು ಹೊಂದಿದ್ದರು. ಪ್ರತಿಯೊಂದು ವಿಷಯದಲ್ಲೂ ಅಲ್ಲಾಹನ ಕಡೆಗೆ ಮರಳುವವರಾಗಿದ್ದರು.

إِنَّا سَخَّرْنَا ٱلْجِبَالَ مَعَهُۥ يُسَبِّحْنَ
بِٱلْعَشِىِّ وَٱلْإِشْرَاقِ ﴿١٨﴾

18. ಬೆಳಗು ಬೈಗುಗಳಲ್ಲಿ ಅವರೊಂದಿಗೆ ಕೀರ್ತನೆ ಮಾಡುವಂತೆ ಪರ್ವತಗಳನ್ನು ನಾವು ಅವರಿಗೆ ನಿಯಂತ್ರಿಸಿ ಕೊಟ್ಟಿದ್ದೆವು.

وَٱلطَّيْرَ مَحْشُورَةً ۖ كُلٌّ لَّهُۥٓ أَوَّابٌ ﴿١٩﴾

19. ಪಕ್ಷಿಗಳು ಒಟ್ಟಾಗಿ ಬಂದು ಸೇರುತ್ತಿದ್ದುವು ಮತ್ತು ಅವೆಲ್ಲವೂ ಅವರ ಕೀರ್ತನೆಯ ಕಡೆಗೆ ಲಕ್ಷ್ಯ ಕೊಡುತ್ತಿದ್ದವು.

وَشَدَدْنَا مُلْكَهُۥ وَءَاتَيْنَٰهُ ٱلْحِكْمَةَ
وَفَصْلَ ٱلْخِطَابِ ﴿٢٠﴾

20. ನಾವು ಅವರ ಸಾಮ್ರಾಜ್ಯವನ್ನು ಪ್ರಬಲ ಗೊಳಿಸಿದ್ದೆವು. ಅವರಿಗೆ ಯುಕ್ತಿಯನ್ನು ದಯಪಾಲಿಸಿದ್ದೆವು ಮತ್ತು ನಿರ್ಣಾಯಕವಾಗಿ ಮಾತನಾಡುವ ಸಾಮರ್ಥ್ಯ ನೀಡಿದ್ದೆವು.

وَهَلْ أَتَىٰكَ نَبَؤُا۟ ٱلْخَصْمِ إِذْ تَسَوَّرُوا۟
ٱلْمِحْرَابَ ﴿٢١﴾

21. ಗೋಡೆಯ ಮೇಲೇರಿ ಅವರ ಮೇಲ್ಮಾವಡಿಯೊಳಕ್ಕೆ ನುಗ್ಗಿ ಬಂದಿದ್ದ ಆ ವ್ಯಾಜ್ಯದವರ ಸುದ್ದಿ ನಿಮಗೆ ತಲುಪಿದೆಯೇ?

إِذْ دَخَلُوا۟ عَلَىٰ دَاوُۥدَ فَفَزِعَ مِنْهُمْ
قَالُوا۟ لَا تَخَفْ ۖ خَصْمَانِ بَغَىٰ بَعْضُنَا
عَلَىٰ بَعْضٍ فَٱحْكُم بَيْنَنَا بِٱلْحَقِّ
وَلَا تُشْطِطْ وَٱهْدِنَآ إِلَىٰ سَوَآءِ ٱلصِّرَٰطِ ﴿٢٢﴾

22. ಅವರು ದಾವೂದರ ಬಳಿಗೆ ಬಂದಾಗ ದಾವೂದರು ಅವರನ್ನು ಕಂಡು ಬೆಚ್ಚಿಬಿದ್ದರು. ಅವರು ಹೀಗೆಂದರು- ಹೆದರಬೇಡಿರಿ, "ನಾವು ಒಂದು ವ್ಯಾಜ್ಯದ ಎರಡು ಪಕ್ಷಗಳಾಗಿದ್ದು, ನಮ್ಮ ಪೈಕಿ ಒಬ್ಬನು ಇನ್ನೊಬ್ಬನ ಮೇಲೆ ಅನ್ಯಾಯವೆಸಗಿರುವನು. ತಾವು ನಮ್ಮ ನಡುವೆ ಸತ್ಯಕ್ಕನುಗುಣವಾಗಿ ತೀರ್ಮಾನ ಮಾಡಿಬಿಡಿರಿ, ಅನ್ಯಾಯವೆಸಗಬೇಡಿರಿ ಮತ್ತು ನಮಗೆ ಸನ್ಮಾರ್ಗವನ್ನು ತೋರಿಸಿರಿ.

إِنَّ هَٰذَآ أَخِى لَهُۥ تِسْعٌ وَتِسْعُونَ
نَعْجَةً وَلِىَ نَعْجَةٌ وَٰحِدَةٌ فَقَالَ

23. ಇವನು ನನ್ನ ಸಹೋದರ. ಇವನ ಬಳಿ ತೊಂಭತ್ತೊಂಭತ್ತು ಕುರಿಗಳಿವೆ. ನನ್ನ ಬಳಿ ಒಂದು ಕುರಿ ಮಾತ್ರ ಇದೆ. ಇವನು ಆ ಒಂದು ಕುರಿಯನ್ನೂ ನನಗೆ ಒಪ್ಪಿಸಿ ಬಿಡು ಎಂದು

ನನ್ನೊಡನೆ ಹೇಳಿದನು ಮತ್ತು ಮಾತಿನಲ್ಲಿ ನನ್ನನ್ನು ಸೋಲಿಸಿ ಬಿಟ್ಟನು."[5]

أَكْفِلْنِيهَا وَعَزَّنِي فِي الْخِطَابِ ﴿٢٣﴾

24. ಆಗ ದಾವೂದರು- "ಇವನು ತನ್ನ ಕುರಿಗಳೊಂದಿಗೆ ನಿನ್ನ ಕುರಿಯನ್ನು ಸೇರಿಸಿಕೊಳ್ಳಲು ಆಗ್ರಹಿಸುವ ಮೂಲಕ ನಿಜಕ್ಕೂ ನಿನ್ನ ಮೇಲೆ ಅಕ್ರಮವೆಸಗಿರುವನು. ನಿಶ್ಚಯವಾಗಿಯೂ ಸಹಬಾಳುವೆ ನಡೆಸುವವರು ಹೆಚ್ಚಾಗಿ ಪರಸ್ಪರ ಅತಿರೇಕವೆಸಗುತ್ತಲೇ ಇರುತ್ತಾರೆ. ಸತ್ಯವಿಶ್ವಾಸಿಗಳಾದವರು ಮತ್ತು ಸತ್ಕರ್ಮವೆಸಗುವವರು ಮಾತ್ರ ಇದರಿಂದ ದೂರವಿರುತ್ತಾರೆ. ಇಂತಹವರು ಬಹಳ ಕಡಿಮೆ" ಎಂದು ಉತ್ತರ ಕೊಟ್ಟರು. (ಹೀಗೆ ಹೇಳುತ್ತಾ) ದಾವೂದರು, ವಾಸ್ತವದಲ್ಲಿ ಈ ಮೂಲಕ ನಾವು ಅವರನ್ನು ಪರೀಕ್ಷಿಸಿದೆವೆಂಬುದನ್ನು ಅರಿತುಕೊಂಡರು. ಆ ಪ್ರಕಾರ ಅವರು ತಮ್ಮ ಪ್ರಭುವಿನೊಡನೆ ಕ್ಷಮಾಯಾಚನೆ ಮಾಡಿದರು ಮತ್ತು ಸಾಷ್ಟಾಂಗವೆರಗಿ ಪಶ್ಚಾತ್ತಾಪಪಟ್ಟು ಮರಳಿದರು.

قَالَ لَقَدْ ظَلَمَكَ بِسُؤَالِ نَعْجَتِكَ إِلَىٰ نِعَاجِهِ ۖ وَإِنَّ كَثِيرًا مِنَ الْخُلَطَاءِ لَيَبْغِي بَعْضُهُمْ عَلَىٰ بَعْضٍ إِلَّا الَّذِينَ آمَنُوا وَعَمِلُوا الصَّالِحَاتِ وَقَلِيلٌ مَا هُمْ ۗ وَظَنَّ دَاوُودُ أَنَّمَا فَتَنَّاهُ فَاسْتَغْفَرَ رَبَّهُ وَخَرَّ رَاكِعًا وَأَنَابَ ۩ ﴿٢٤﴾

25. ಆಗ ನಾವು ಅವರ ಆ ತಪ್ಪನ್ನು ಕ್ಷಮಿಸಿದೆವು.[6] ನಿಶ್ಚಯವಾಗಿಯೂ ನಮ್ಮ ಬಳಿ ಅವರಿಗಾಗಿ ನಿಕಟಸ್ಥಾನ ಹಾಗೂ ಉತ್ತಮವಾದ ಅಂತಿಮ ನೆಲೆ ಇದೆ.

فَغَفَرْنَا لَهُ ذَٰلِكَ ۖ وَإِنَّ لَهُ عِنْدَنَا لَزُلْفَىٰ وَحُسْنَ مَآبٍ ﴿٢٥﴾

26. (ನಾವು ಅವರೊಡನೆ ಹೀಗೆಂದೆವು); "ದಾವೂದ್, ನಾವು ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಯಾಗಿ ಮಾಡಿದ್ದೇವೆ. ಆದುದರಿಂದ ನೀವು ಜನರ ನಡುವೆ ಸತ್ಯದೊಂದಿಗೆ ಆಳ್ವಿಕೆ ನಡೆಸಿರಿ. ಸ್ವೇಚ್ಛೆಯನ್ನು ಅನುಸರಿಸಬೇಡಿರಿ. ಅದು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿಬಿಡುವುದು. ಅಲ್ಲಾಹನ ಮಾರ್ಗದಿಂದ ತಪ್ಪಿ ಹೋಗುವವರಿಗೆ, ಲೆಕ್ಕಾಚಾರ ನಡೆಯಲಿರುವ ದಿನವನ್ನು ಮರೆತು ಬಿಟ್ಟಿದ್ದಕ್ಕಾಗಿ ಖಂಡಿತವಾಗಿಯೂ ಕಠಿಣ ಯಾತನೆ ಇದೆ."

يَا دَاوُودُ إِنَّا جَعَلْنَاكَ خَلِيفَةً فِي الْأَرْضِ فَاحْكُمْ بَيْنَ النَّاسِ بِالْحَقِّ وَلَا تَتَّبِعِ الْهَوَىٰ فَيُضِلَّكَ عَنْ سَبِيلِ اللَّهِ ۚ إِنَّ الَّذِينَ يَضِلُّونَ عَنْ سَبِيلِ اللَّهِ لَهُمْ عَذَابٌ شَدِيدٌ بِمَا نَسُوا يَوْمَ الْحِسَابِ ﴿٢٦﴾

5. ಫಿರ್ಯಾದುದಾರ ಕುರಿಯನ್ನು ಅವನು ನನ್ನಿಂದ ಕಸಿದುಕೊಂಡ ಎಂದು ಹೇಳುತ್ತಿಲ್ಲ. ಬದಲಾಗಿ ನನ್ನ ಕುರಿಯನ್ನು ಕೇಳುತ್ತಿದ್ದಾನೆ ಮತ್ತು ಅದನ್ನು ಅವನಿಗೊಪ್ಪಿಸಿ ಬಿಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾನೆ. ಅವನು ದೊಡ್ಡ ವ್ಯಕ್ತಿಯಾದ್ದರಿಂದ ನಾನು ಒತ್ತಡದಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ ಎಂದು ಹೇಳುತ್ತಿದ್ದಾನೆ.

6. ಹ. ದಾವೂದ್‌ರಿಂದ(ಅ) ಖಂಡಿತವಾಗಿ ತಪ್ಪುಸಂಭವಿಸಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಅದು ಕುರಿಗಳ ಮೊಕದ್ದಮೆಯೊಂದಿಗೆ ಯಾವುದೋ ರೀತಿಯ ಹೋಲಿಕೆಯಿದ್ದಂತಹ ತಪ್ಪಾಗಿತ್ತು. ಆದ್ದರಿಂದಲೇ ಪ್ರಸ್ತುತ ಮೊಕದ್ದಮೆಯ ತೀರ್ಮಾನ ಮಾಡುತ್ತಿರುವಾಗ ಈ ಮೂಲಕ ನನ್ನನ್ನು ಪರೀಕ್ಷಿಸಲಾಗುತ್ತಿದೆ ಎಂದು ತಟ್ಟನೆ ಅವರಿಗೆ ಹೊಳೆಯಿತು. ಆದರೆ ಅದು ಕ್ಷಮಿಸಲಾಗದಷ್ಟು ಅಥವಾ ಕ್ಷಮಿಸಲಾದರೂ ತಮ್ಮ ಉನ್ನತ ಪದವಿಯಿಂದ ವಂಚಿತಗೊಳಿಸಲ್ಪಡುವಷ್ಟು ತೀವ್ರ ಸ್ವರೂಪದ ತಪ್ಪಾಗಿರಲಿಲ್ಲ. ತನ್ನಿಮಿತ್ತ ಅವರು ಸಾಷ್ಟಾಂಗವೆರಗಿ ಕ್ಷಮೆ ಯಾಚಿಸಿದಾಗ ಅವರನ್ನು ಕ್ಷಮಿಸಲಾಯಿತು, ಮಾತ್ರವಲ್ಲ ಇಹ-ಪರಗಳಲ್ಲಿ ಅವರಿಗಿದ್ದ ಉನ್ನತ ಸ್ಥಾನಕ್ಕೂ ಯಾವುದೇ ಬಾಧಕ ಉಂಟಾಗಲಿಲ್ಲ ಎಂದು ಅಲ್ಲಾಹನು ಸ್ವತಃ ಸ್ಪಷ್ಟಪಡಿಸುತ್ತಿದ್ದಾನೆ.

27. ನಾವು ಈ ಆಕಾಶವನ್ನೂ ಭೂಮಿಯನ್ನೂ ಅವುಗಳ ನಡುವೆ ಇರುವ ಈ ಜಗತ್ತನ್ನೂ ವೃಥಾ ಸೃಷ್ಟಿಸಲಿಲ್ಲ. ಇದು ಸತ್ಯನಿಷೇಧಿಗಳ ಭ್ರಮೆಯಾಗಿದೆ ಮತ್ತು ಇಂತಹ ಸತ್ಯನಿಷೇಧಿಗಳಿಗೆ ನರಕಾಗ್ನಿಯ ಮೂಲಕ ವಿನಾಶವಿದೆ.

وَمَا خَلَقْنَا السَّمَاءَ وَالْأَرْضَ وَمَا
بَيْنَهُمَا بَاطِلًا ۚ ذَٰلِكَ ظَنُّ الَّذِينَ كَفَرُوا ۚ
فَوَيْلٌ لِّلَّذِينَ كَفَرُوا مِنَ النَّارِ ﴿٢٧﴾

28. ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗುವವರನ್ನೂ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವವರನ್ನೂ ನಾವು ಸಮಾನವಾಗಿಸಬೇಕೇ? ಧರ್ಮನಿಷ್ಠರನ್ನು ನಾವು ಧರ್ಮಭ್ರಷ್ಟರಂತೆ ಮಾಡಬೇಕೇ?

أَمْ نَجْعَلُ الَّذِينَ آمَنُوا وَعَمِلُوا الصَّالِحَاتِ
كَالْمُفْسِدِينَ فِي الْأَرْضِ أَمْ نَجْعَلُ
الْمُتَّقِينَ كَالْفُجَّارِ ﴿٢٨﴾

29. (ಪೈಗಂಬರರೇ,) ಇದೊಂದು ಅತಿ ಸಮೃದ್ಧವಾದ ಗ್ರಂಥವಾಗಿದ್ದು ಇವರು ಇದರ ಸೂಕ್ತಗಳ ಕುರಿತು ಚಿಂತನೆ ನಡೆಸಲೆಂದು ಮತ್ತು ಬುದ್ಧಿಜೀವಿಗಳು ಇದರಿಂದ ಉಪದೇಶ ಪಡೆಯುವಂತಾಗಲೆಂದು ನಾವು ಇದನ್ನು ನಿಮಗೆ ಅವತೀರ್ಣಗೊಳಿಸಿದ್ದೇವೆ.

كِتَابٌ أَنزَلْنَاهُ إِلَيْكَ مُبَارَكٌ لِّيَدَّبَّرُوا
آيَاتِهِ وَلِيَتَذَكَّرَ أُولُو الْأَلْبَابِ ﴿٢٩﴾

30. ನಾವು ದಾವೂದರಿಗೆ ಸುಲೈಮಾನ್(ರಂತಹ ಪುತ್ರ)ರನ್ನು ದಯಪಾಲಿಸಿದೆವು. (ಅವರು) ಅತ್ಯುತ್ತಮ ದಾಸರು. ತಮ್ಮ ಪ್ರಭುವಿನ ಕಡೆಗೆ ಅತಿ ಹೆಚ್ಚಾಗಿ ಮರಳುವವರು!

وَوَهَبْنَا لِدَاوُودَ سُلَيْمَانَ ۚ نِعْمَ الْعَبْدُ ۖ
إِنَّهُ أَوَّابٌ ﴿٣٠﴾

31. ಅದೊಂದು ಸಂದರ್ಭವೂ ಸ್ಮರಣಾರ್ಹವಾಗಿದೆ; ಒಂದು ಸಂಜೆ ಅವರ ಮುಂದೆ ಚೆನ್ನಾಗಿ ಪಳಗಿದ ಕುದುರೆಗಳನ್ನು ತರಲಾದಾಗ,

إِذْ عُرِضَ عَلَيْهِ بِالْعَشِيِّ الصَّافِنَاتُ الْجِيَادُ ﴿٣١﴾

32. ಅವರು, "ನಾನು ನನ್ನ ಪ್ರಭುವಿನ ಸ್ಮರಣೆಯ ಕಾರಣಕ್ಕಾಗಿ ಈ ಸೊತ್ತಿನ ಮೇಲೆ ಪ್ರೀತಿಯನ್ನಿರಿಸಿದ್ದೇನೆ" ಎಂದರು. ಆ ಕುದುರೆಗಳು ಕಣ್ಮರೆಯಾದಾಗ,

فَقَالَ إِنِّي أَحْبَبْتُ حُبَّ الْخَيْرِ عَن
ذِكْرِ رَبِّي حَتَّىٰ تَوَارَتْ بِالْحِجَابِ ﴿٣٢﴾

33. ಅವುಗಳನ್ನು ನನ್ನ ಬಳಿಗೆ ಮರಳಿ ತನ್ನಿರಿ" (ಎಂದು ಅವರು ಅಪ್ಪಣೆ ಕೊಟ್ಟರು). ತರುವಾಯ ಅವುಗಳ ಕಾಲು ಮತ್ತು ಕೊರಳುಗಳ ಮೇಲೆ ಕೈಯಾಡಿಸಿದರು.

رُدُّوهَا عَلَيَّ ۖ فَطَفِقَ مَسْحًا بِالسُّوقِ
وَالْأَعْنَاقِ ﴿٣٣﴾

34. ಮತ್ತು (ನೋಡಿರಿ) ಸುಲೈಮಾನರನ್ನೂ ನಾವು ಪರೀಕ್ಷೆಗೊಳಪಡಿಸಿದೆವು ಮತ್ತು ಅವರ ಪೀಠದ ಮೇಲೆ ಒಂದು ಜಡ ಶರೀರವನ್ನು ತಂದು ಹಾಕಿದೆವು. ಅನಂತರ ಅವರು ಪಶ್ಚಾತ್ತಾಪಪಟ್ಟು ಮರಳಿದರು.

وَلَقَدْ فَتَنَّا سُلَيْمَانَ وَأَلْقَيْنَا عَلَىٰ
كُرْسِيِّهِ جَسَدًا ثُمَّ أَنَابَ ﴿٣٤﴾

35. ಅವರು ಹೀಗೆಂದರು- "ನನ್ನ ಪ್ರಭೂ, ನನ್ನನ್ನು ಕ್ಷಮಿಸು. ನನ್ನ ಬಳಿಕ ಇನ್ನಾರಿಗೂ ಅರ್ಹವಾಗಿರದಂತಹ ಸಾಮ್ರಾಜ್ಯವನ್ನು ನನಗೆ

قَالَ رَبِّ اغْفِرْ لِي وَهَبْ لِي مُلْكًا لَّا
يَنبَغِي لِأَحَدٍ مِّنْ بَعْدِي ۖ إِنَّكَ

أَنتَ الْوَهَّابُ ﴿٣٥﴾

ದಯಪಾಲಿಸು. ನಿಜಕ್ಕೂ ನೀನೇ ನೈಜ ದಾನಿಯಾಗಿರುವೆ."[7]

فَسَخَّرْنَا لَهُ الرِّيحَ تَجْرِي بِأَمْرِهِ رُخَاءً حَيْثُ أَصَابَ ﴿٣٦﴾

36. ಆಗ ನಾವು ಅವರಿಗಾಗಿ ಗಾಳಿಯನ್ನು ನಿಯಂತ್ರಿಸಿಕೊಟ್ಟೆವು. ಅದು ಅವರ ಅಪ್ಪಣೆಯಂತೆ ಅವರು ಇಚ್ಛಿಸಿದ ದಿಕ್ಕಿಗೆ ಮಂದವಾಗಿ ಬೀಸುತ್ತಿತ್ತು-

وَالشَّيَاطِينَ كُلَّ بَنَّاءٍ وَغَوَّاصٍ ﴿٣٧﴾

37. ಮತ್ತು ಶೈತಾನರನ್ನು ನಿಯಂತ್ರಿಸಿಕೊಟ್ಟೆವು. ಎಲ್ಲ ವಿಧದ ವಾಸ್ತು ಶಿಲ್ಪಿಗಳೂ ಮುಳುಗು ಪ್ರವೀಣರೂ-

وَآخَرِينَ مُقَرَّنِينَ فِي الْأَصْفَادِ ﴿٣٨﴾

38. ಸಂಕೋಲೆಗಳಲ್ಲಿ ಬಿಗಿಯಲ್ಪಟ್ಟ ಇತರರೂ ಇದ್ದರು.

هَٰذَا عَطَاؤُنَا فَامْنُنْ أَوْ أَمْسِكْ بِغَيْرِ حِسَابٍ ﴿٣٩﴾

39. ನಾವು ಅವರೊಡನೆ, "ಇದು ನಮ್ಮ ಕೊಡುಗೆ, ನೀವಿಚ್ಛಿಸಿದವರಿಗೆ ಕೊಡಲಿಕ್ಕೂ ನೀವಿಚ್ಛಿಸಿದವರಿಗೆ ಕೊಡದಿರಲಿಕ್ಕೂ ನಿಮಗೆ ಅಧಿಕಾರವಿದೆ. ಯಾವ ಲೆಕ್ಕಾಚಾರವೂ ಇಲ್ಲ" ಎಂದು ಹೇಳಿದೆವು.

وَإِنَّ لَهُ عِندَنَا لَزُلْفَىٰ وَحُسْنَ مَآبٍ ﴿٤٠﴾

40. ನಿಶ್ಚಯವಾಗಿಯೂ ಅವರಿಗಾಗಿ ನಮ್ಮ ಬಳಿ ನಿಕಟ ಸ್ಥಾನವೂ ಉತ್ತಮ ಅಂತಿಮ ನೆಲೆಯೂ ಇದೆ.

وَاذْكُرْ عَبْدَنَا أَيُّوبَ إِذْ نَادَىٰ رَبَّهُ أَنِّي مَسَّنِيَ الشَّيْطَانُ بِنُصْبٍ وَعَذَابٍ ﴿٤١﴾

41. ನಮ್ಮ ದಾಸ ಅಯ್ಯೂಬರನ್ನು ಸ್ಮರಿಸಿರಿ. ಶೈತಾನನು ನನ್ನನ್ನು ಕಷ್ಟ ಹಾಗೂ ಯಾತನೆಗೊಳಪಡಿಸಿ ಬಿಟ್ಟಿದ್ದಾನೆಂದು ಅವರು ತಮ್ಮ ಪ್ರಭುವನ್ನು ಪ್ರಾರ್ಥಿಸಿದ ಸಂದರ್ಭ.[8]

---

7. ಅಲ್ಲಾಹನು ಹ. ದಾವೂದ್(ಅ) ಮತ್ತು ಹ. ಸುಲೈಮಾನ್‌ರಂತಹ(ಅ) ಉನ್ನತ ಪದವಿಯ ಪ್ರವಾದಿಗಳು ಮತ್ತು ಪ್ರೀತಿಪಾತ್ರರಾದ ದಾಸರನ್ನೂ ಪರೀಕ್ಷಿಸದೆ ಬಿಟ್ಟಿಲ್ಲವೆಂದು ತಿಳಿಯಪಡಿಸುವುದು ಇದರ ಉದ್ದೇಶವೆಂದು ವಿವರಣಾಶೈಲಿಯಿಂದ ಸ್ಪಷ್ಟವಾಗುತ್ತದೆ. ಯಾವ ಪರೀಕ್ಷೆಯ ಬಗ್ಗೆ ಇಲ್ಲಿ ಪ್ರಸ್ತಾವಿಸಲಾಗಿದೆಯೋ ಅದರ ಕುರಿತು ವ್ಯಾಖ್ಯಾನಕಾರರಿಗೆ ಒಮ್ಮತಾಭಿಪ್ರಾಯ ಇರುವಂತಹ ಯಾವುದೇ ವಿವರಣೆಗಳಿರುವುದು ನಮಗೆ ತಿಳಿದಿಲ್ಲ. ಇಲ್ಲಿ ಹ. ಸುಲೈಮಾನ್(ಅ), "ನನ್ನ ಪ್ರಭೂ! ನನ್ನನ್ನು ಕ್ಷಮಿಸು, ನನ್ನ ಬಳಿಕ ಇನ್ನಾರಿಗೂ ಅರ್ಹವಾಗಿರದಂತಹ ಸಾಮ್ರಾಜ್ಯವನ್ನು ನನಗೆ ದಯಪಾಲಿಸು" ಎಂದು ಪ್ರಾರ್ಥಿಸಿದ್ದಾರೆ. ಈ ಪ್ರಾರ್ಥನೆಯನ್ನು ಬನೀಇಸ್ರಾಈಲರ ಚರಿತ್ರೆಯ ಬೆಳಕಿನಲ್ಲಿ ಓದಿದರೆ, ಅವರ ಮನಸ್ಸಿನಲ್ಲಿ ಅವರ ನಂತರ ಅವರ ಮಗ ಉತ್ತರಾಧಿಕಾರಿಯಾಗಬೇಕು, ಆಡಳಿತ ನಿರ್ವಹಣೆ ಅವರ ಸಂತತಿಯಲ್ಲೇ ಮುಂದುವರಿಯಬೇಕು ಎಂಬ ಇಚ್ಛೆ ಪ್ರಾಯಶಃ ಇತ್ತೆಂದು ಭಾಸವಾಗುತ್ತದೆ. ಇದನ್ನೇ ಅಲ್ಲಾಹನು ಅವರ ಪಾಲಿನ ಪರೀಕ್ಷೆ ಎಂದು ಹೇಳಿದ್ದಾನೆ. ಅವರ ಉತ್ತರಾಧಿಕಾರಿ 'ರುಹುಬ್‌ಆಮ್' ಓರ್ವ ಅಯೋಗ್ಯ ಯುವಕನಾಗಿ ಬೆಳೆದಾಗ ಅವರು ಈ ಬಗ್ಗೆ ಎಚ್ಚರಗೊಂಡರು. ದಾವೂದ್ ಮತ್ತು ಸುಲೈಮಾನ್‌ರ(ಅ) ಸಾಮ್ರಾಜ್ಯವನ್ನು ನಾಲ್ಕು ದಿನವೂ ಸರಿಯಾಗಿ ನಿಯಂತ್ರಿಸಲಾಗದಂತಹ ಲಕ್ಷಣಗಳು ಅವನಲ್ಲಿ ಕಂಡು ಬಂದಿದ್ದವು. 'ಅವರ ಪೀಠದ ಮೇಲೆ ಒಂದು ಜಡ ದೇಹವನ್ನು ತಂದು ಹಾಕಲಾಯಿತು' ಎಂಬುದರ ಅರ್ಥ ಪ್ರಾಯಶಃ ಯಾವ ಪುತ್ರನನ್ನು ಅವರು ತಮ್ಮ ಕುರ್ಚಿಯಲ್ಲಿ ಕುಳ್ಳಿರಿಸ ಬಯಸಿದ್ದರೋ ಅವನು ಮಹಾ ಅಯೋಗ್ಯನಾಗಿದ್ದನು ಎಂದೇ ಆಗಿರಬಹುದು.

8. ಇದರ ಅರ್ಥ ಪಿಶಾಚಿಯು ನನ್ನನ್ನು ರೋಗಕ್ಕೀಡು ಮಾಡಿದೆ ಮತ್ತು ನನ್ನ ಮೇಲೆ ಸಂಕಷ್ಟವನ್ನು ಇಳಿಸಿದೆ ಎಂದಲ್ಲ. ಇದರ ನಿಜವಾದ ಅರ್ಥವೇನೆಂದರೆ ರೋಗದ ತೀವ್ರತೆ, ಸಂಪತ್ತಿನ ನಷ್ಟ ಮತ್ತು ಬಂಧುಬಳಗದವರ ಅಗಲಿಕೆಗಳೆಲ್ಲದಕ್ಕಿಂತಲೂ ಮಿಗಿಲಾಗಿ ಪಿಶಾಚಿಯ ಪ್ರಲೋಭನೆಗಳು ನನ್ನನ್ನು ದಂಗುಪಡಿಸಿದೆ, ಇಂತಹ ಪರಿಸ್ಥಿತಿಯಲ್ಲಿ ಅದು ನನ್ನನ್ನು ಪ್ರಭುವಿನ ಬಗ್ಗೆ ನಿರಾಶೆ ತಾಳುವಂತೆ ಮಾಡಲು ಪ್ರಯತ್ನಿಸುತ್ತಿದೆ, ನನ್ನನ್ನು ಪ್ರಭುವಿನ ಬಗ್ಗೆ ಕೃತಘ್ನತೆ ತೋರುವವನಾಗಿ ಮಾಡಬಯಸುತ್ತಿದೆ, ನಾನು ತಾಳ್ಮೆಯನ್ನು ಕೈಬಿಡಬೇಕೆಂದು ಅದು ಹೊಂಚುಹಾಕುತ್ತಿದೆ.

42. "ನಿಮ್ಮ ಕಾಲನ್ನು ನೆಲಕ್ಕೆ ಬಡಿಯಿರಿ" (ಎಂದು ನಾವು ಆಜ್ಞಾಪಿಸಿದೆವು). ಇದೋ ತಣ್ಣೀರು, ಸ್ನಾನಕ್ಕಾಗಿ ಮತ್ತು ಕುಡಿಯಲಿಕ್ಕಾಗಿ.

ارْكُضْ بِرِجْلِكَ ۖ هَٰذَا مُغْتَسَلٌ بَارِدٌ وَشَرَابٌ ﴿٤٢﴾

43. ನಾವು ಅವರಿಗೆ ಅವರ ಮನೆಯವರನ್ನು ಮರಳಿ ಕೊಟ್ಟೆವು ಮತ್ತು ಅದರೊಂದಿಗೆ ಪುನಃ ಅಷ್ಟನ್ನೇ ಕೊಟ್ಟೆವು. ಇದು ನಮ್ಮ ವತಿಯಿಂದ ಕರುಣೆಯ ರೂಪದಲ್ಲಿ ಮತ್ತು ಬುದ್ಧಿಜೀವಿಗಳಿಗೆ ಪಾಠವಾಗಿ ನೀಡಿದುದಾಗಿತ್ತು.

وَوَهَبْنَا لَهُ أَهْلَهُ وَمِثْلَهُمْ مَعَهُمْ رَحْمَةً مِنَّا وَذِكْرَىٰ لِأُولِي الْأَلْبَابِ ﴿٤٣﴾

44. (ನಾವು ಅವರೊಡನೆ ಹೀಗೆ ಹೇಳಿದೆವು) "ಹುಲ್ಲುಕಡ್ಡಿಗಳ ಒಂದು ಸೂಡಿಯನ್ನು ತೆಗೆದುಕೊಳ್ಳಿರಿ, ಅದರಿಂದ ಹೊಡೆಯಿರಿ ಮತ್ತು ನಿಮ್ಮ ಶಪಥವನ್ನು ಮುರಿಯಬೇಡಿರಿ."[9] ನಾವು ಅವರನ್ನು ಸಹನೆಯುಳ್ಳವರಾಗಿ ಕಂಡೆವು. (ಅವರು) ಅತ್ಯುತ್ತಮ ದಾಸರು. ತಮ್ಮ ಪ್ರಭುವಿನ ಕಡೆಗೆ ಬಹಳಷ್ಟು ಮರಳುವವರು.

وَخُذْ بِيَدِكَ ضِغْثًا فَاضْرِبْ بِهِ وَلَا تَحْنَثْ ۗ إِنَّا وَجَدْنَاهُ صَابِرًا ۚ نِعْمَ الْعَبْدُ ۖ إِنَّهُ أَوَّابٌ ﴿٤٤﴾

45. ನಮ್ಮ ದಾಸರಾದ ಇಬ್‌ರಾಹೀಮ್, ಇಸ್‌ಹಾಕ್ ಮತ್ತು ಯಅ್‌ಕೂಬರನ್ನು ಸ್ಮರಿಸಿರಿ. ಅವರು ಮಹಾ ಕರ್ಮಸಾಮರ್ಥ್ಯವಿರುವವರೂ ದೂರದೃಷ್ಟಿಯುಳ್ಳವರೂ ಆಗಿದ್ದರು.

وَاذْكُرْ عِبَادَنَا إِبْرَاهِيمَ وَإِسْحَاقَ وَيَعْقُوبَ أُولِي الْأَيْدِي وَالْأَبْصَارِ ﴿٤٥﴾

46. ನಾವು ಅವರನ್ನು ಒಂದು ವಿಶಿಷ್ಟ ಗುಣದಿಂದಾಗಿ ಪುನೀತರಾಗಿ ಮಾಡಿದೆವು. ಅದು ಪರಲೋಕ ಗೃಹದ ಸ್ಮರಣೆಯಾಗಿತ್ತು.

إِنَّا أَخْلَصْنَاهُمْ بِخَالِصَةٍ ذِكْرَى الدَّارِ ﴿٤٦﴾

47. ನಿಶ್ಚಯವಾಗಿಯೂ ಅವರು ನಮ್ಮ ಬಳಿ ಆಯ್ದ ಸಜ್ಜನರಲ್ಲಿ ಗಣಿಸಲ್ಪಡುತ್ತಾರೆ.

وَإِنَّهُمْ عِنْدَنَا لَمِنَ الْمُصْطَفَيْنَ الْأَخْيَارِ ﴿٤٧﴾

48. ಮತ್ತು ಇಸ್ಮಾಈಲ್‌ರನ್ನೂ ಅಲ್‌ಯಸಅರನ್ನೂ ದುಲ್‌ಕಿಫ್ಲರನ್ನೂ ಸ್ಮರಿಸಿರಿ. ಇವರೆಲ್ಲರೂ ಸಜ್ಜನರಲ್ಲಾಗಿದ್ದರು.

وَاذْكُرْ إِسْمَاعِيلَ وَالْيَسَعَ وَذَا الْكِفْلِ ۖ وَكُلٌّ مِنَ الْأَخْيَارِ ﴿٤٨﴾

9. ಹ. ಅಯ್ಯೂಬ್(ಅ) ರೋಗದ ಅವಸ್ಥೆಯಲ್ಲಿ ಅಸಮಾಧಾನದಿಂದ ಯಾರಿಗೋ ಹೊಡೆಯುವ ಶಪಥ ಮಾಡಿದ್ದರೆಂದು ಈ ಪದಗಳನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ. (ಅವರು ಪತ್ನಿಯನ್ನು ಹೊಡೆಯುವ ಶಪಥ ಹೂಡಿದ್ದರೆಂದು ವರದಿಗಳಲ್ಲಿದೆ) 'ನಿನಗೆ ಇಂತಿಷ್ಟು ಕೊರಡೆಯೇಟುಗಳನ್ನು ಬಾರಿಸುತ್ತೇನೆ' ಎಂದು ಅವರು ಶಪಥ ಹೂಡಿದ್ದರು. ಅಲ್ಲಾಹನು ಅವರಿಗೆ ಪೂರ್ಣ ಆರೋಗ್ಯವನ್ನು ದಯಪಾಲಿಸಿ, ರೋಗಾವಸ್ಥೆಯ ಸಿಟ್ಟು ದೂರವಾದಾಗ ಅವರು ಉಭಯ ಸಂಕಟಕ್ಕೆ ಸಿಲುಕಿದರು. ಶಪಥವನ್ನು ಈಡೇರಿಸಿದರೆ ಅನ್ಯಾಯವಾಗಿ ನಿರ್ದೋಷಿಯೊಬ್ಬರಿಗೆ ಥಳಿಸ ಬೇಕಾಗುತ್ತದೆ. ಶಪಥವನ್ನು ಮುರಿದರೆ ಒಂದು ಪಾಪವನ್ನೆಸಗಿದಂತಾಗುತ್ತದೆ. ಈ ಉಭಯ ಸಂಕಟದಿಂದ ಅವರನ್ನು ಪಾರು ಮಾಡಲಿಕ್ಕಾಗಿ ಅಲ್ಲಾಹನು ಹೀಗೆ ಆಜ್ಞಾಪಿಸಿದನು, "ಒಂದು ಹಿಡಿಸೂಡಿಯನ್ನು ತೆಗೆದುಕೊಳ್ಳಿರಿ. ಅದರಲ್ಲಿ ನೀವು ಎಷ್ಟು ಕೊರಡೆಯೇಟುಗಳನ್ನು ಬಾರಿಸ ಬೇಕೆಂದಿದ್ದಿರೋ ಅಷ್ಟೇ ಕಡ್ಡಿಗಳಿರಲಿ. ಅದರ ಮೂಲಕ ನೀವು ಹೊಡೆಯಬಯಸಿರುವ ವ್ಯಕ್ತಿಗೆ ಒಂದು ಏಟು ಕೊಡಿರಿ. ಈ ರೀತಿ ನಿಮ್ಮ ಶಪಥವೂ ಈಡೇರುತ್ತದೆ ಮತ್ತು ಅವನು ಅನ್ಯಾಯವಾಗಿ ಕಷ್ಟಕ್ಕೀಡಾಗುವುದೂ ತಪ್ಪುತ್ತದೆ."

49. ಇದೊಂದು ಬೋಧನೆಯಾಗಿತ್ತು. (ಇನ್ನು ಕೇಳಿರಿ) ಧರ್ಮನಿಷ್ಠರಿಗಾಗಿ ನಿಶ್ಚಯವಾಗಿಯೂ ಅತ್ಯುತ್ತಮ ನಿವಾಸವಿದೆ.

هٰذَا ذِكْرٌ ۚ وَإِنَّ لِلْمُتَّقِينَ لَحُسْنَ مَآبٍ ﴿٤٩﴾

50. ಶಾಶ್ವತವಾದ ಸ್ವರ್ಗೋದ್ಯಾನಗಳಿದ್ದು ಅವುಗಳ ಕದಗಳು ಅವರ ಪಾಲಿಗೆ ತೆರೆದಿರುವುವು.

جَنّٰتِ عَدْنٍ مُّفَتَّحَةً لَّهُمُ الْأَبْوَابُ ﴿٥٠﴾

51. ಅವರು ಅವುಗಳಲ್ಲಿ ದಿಂಬುಗಳಿಗೆ ಒರಗಿ ಕುಳಿತಿರುವರು. ಹೇರಳ ಫಲಗಳನ್ನೂ ಪಾನೀಯಗಳನ್ನೂ ತರಿಸುತ್ತಿರುವರು-

مُتَّكِـِٔينَ فِيهَا يَدْعُونَ فِيهَا بِفٰكِهَةٍ كَثِيرَةٍ وَشَرَابٍ ﴿٥١﴾

52. ಮತ್ತು ಅವರ ಬಳಿ ಲಜ್ಜಾಶೀಲೆಯರಾದ ಸಮವಯಸ್ಕ ಸ್ತ್ರೀಯರಿರುವರು.

وَعِندَهُمْ قٰصِرٰتُ الطَّرْفِ أَتْرَابٌ ﴿٥٢﴾

53. ಇವೆಲ್ಲ, ವಿಚಾರಣೆಯ ದಿನ ನಿಮಗೆ ನೀಡಲಾಗುವುದೆಂದು ವಾಗ್ದಾನ ಮಾಡಲಾಗುತ್ತಿರುವ ವಸ್ತುಗಳು.

هٰذَا مَا تُوعَدُونَ لِيَوْمِ الْحِسَابِ ﴿٥٣﴾

54. ಇದು ನಮ್ಮ ಕೊಡುಗೆಯಾಗಿದ್ದು, ಇದಕ್ಕೆ ಎಂದೂ ಅಳಿವಿಲ್ಲ.

إِنَّ هٰذَا لَرِزْقُنَا مَا لَهُۥ مِن نَّفَادٍ ﴿٥٤﴾

55. ಇದಂತು ಧರ್ಮನಿಷ್ಠರ ಅಂತಿಮ ಪರಿಣಾಮವಾಯಿತು. (ಅತ್ತ) ವಿದ್ರೋಹಿಗಳಿಗೆ ಅತ್ಯಂತ ನಿಕೃಷ್ಟ ನಿವಾಸವಿದೆ.

هٰذَا ۚ وَإِنَّ لِلطّٰغِينَ لَشَرَّ مَآبٍ ﴿٥٥﴾

56. ನರಕ, ಅದರಲ್ಲಿ ಅವರು ಸುಟ್ಟು ಹೋಗುವರು. ಅತ್ಯಂತ ಕೆಟ್ಟ ನಿವಾಸ.

جَهَنَّمَ يَصْلَوْنَهَا فَبِئْسَ الْمِهَادُ ﴿٥٦﴾

57. ಇದು ಅವರಿಗಾಗಿದೆ. ಆದುದರಿಂದ ಅವರು ಕುದಿಯುತ್ತಿರುವ ನೀರು, ಕೀವು, ರಕ್ತ ಮತ್ತು ಇಂತಹದೇ-

هٰذَا فَلْيَذُوقُوهُ حَمِيمٌ وَغَسَّاقٌ ﴿٥٧﴾

58. ಇತರ ಕಹಿಗಳ ರುಚಿಯನ್ನು ಸವಿಯಲಿ.

وَءَاخَرُ مِن شَكْلِهِۦٓ أَزْوٰجٌ ﴿٥٨﴾

59. (ತಮ್ಮ ಅನುಯಾಯಿಗಳು ನರಕದ ಕಡೆಗೆ ಬರುತ್ತಿರುವುದನ್ನು ಕಂಡು ಅವರು ಪರಸ್ಪರ ಹೀಗೆ ಹೇಳುವರು;) "ಇದೊಂದು ಸೈನ್ಯವು ನಿಮ್ಮ ಬಳಿಗೆ ನುಗ್ಗಿ ಬರುತ್ತಿದೆ. ಇವರಿಗಾಗಿ ಯಾವ ಸ್ವಾಗತವೂ ಇಲ್ಲ. ಇವರು ಅಗ್ನಿಯಲ್ಲಿ ಸುಡಲ್ಪಡುವವರಾಗಿದ್ದಾರೆ."

هٰذَا فَوْجٌ مُّقْتَحِمٌ مَّعَكُمْ ۖ لَا مَرْحَبًۢا بِهِمْ ۚ إِنَّهُمْ صَالُوا النَّارِ ﴿٥٩﴾

60. ಆಗ ಅವರು ಇವರಿಗೆ (ಹೀಗೆ) ಉತ್ತರ ಕೊಡುವರು; "ಅಲ್ಲ, ವಾಸ್ತವದಲ್ಲಿ ನೀವೇ ಸುಟ್ಟು ಹೋಗುತ್ತಿರುವಿರಿ. ಯಾವ ಸ್ವಾಗತವೂ ನಿಮಗಾಗಿ ಇಲ್ಲ. ನಮ್ಮ ಮುಂದೆ ಈ ದುರ್ಗತಿಯನ್ನು ತಂದವರು ನೀವೇ ತಾನೇ? ಈ ನಿವಾಸವು ಎಷ್ಟೊಂದು ನಿಕೃಷ್ಟವಾಗಿದೆ!"

قَالُوا بَلْ أَنتُمْ لَا مَرْحَبًۢا بِكُمْ ۖ أَنتُمْ قَدَّمْتُمُوهُ لَنَا ۖ فَبِئْسَ الْقَرَارُ ﴿٦٠﴾

قَالُوا رَبَّنَا مَنْ قَدَّمَ لَنَا هَٰذَا فَزِدْهُ
عَذَابًا ضِعْفًا فِي النَّارِ ﴿٦١﴾

61. ತರುವಾಯ ಅವರು, "ನಮ್ಮ ಪ್ರಭೂ, ಯಾರು ನಮಗೆ ಈ ದುರ್ಗತಿಯನ್ನೊದಗಿಸುವ ವ್ಯವಸ್ಥೆ ಮಾಡಿದನೋ ಅವನಿಗೆ ನರಕದ ಇಮ್ಮಡಿ ಯಾತನೆ ಕೊಡು" ಎಂದು ಹೇಳುವರು.

وَقَالُوا مَا لَنَا لَا نَرَىٰ رِجَالًا كُنَّا
نَعُدُّهُمْ مِنَ الْأَشْرَارِ ﴿٦٢﴾

62. ಮತ್ತು ಅವರು ಪರಸ್ಪರ ಹೀಗೆ ಹೇಳುವರು- "ನಾವು ಭೂಲೋಕದಲ್ಲಿ ಕೆಟ್ಟವರೆಂದು ಭಾವಿಸುತ್ತಿದ್ದವರು ಇಲ್ಲೆಲ್ಲೂ ನಮಗೆ ತೋರದಿರಲು ಕಾರಣವೇನು?

أَتَّخَذْنَاهُمْ سِخْرِيًّا أَمْ زَاغَتْ
عَنْهُمُ الْأَبْصَارُ ﴿٦٣﴾

63. ನಾವು ಅವರನ್ನು ವೃಥಾ ಅಪಹಾಸ್ಯ ಮಾಡುತ್ತಿದ್ದೆವೋ ಅಥವಾ ಅವರು ಎಲ್ಲಿಯಾದರೂ ಕಣ್ಮರೆಯಾಗಿರುವರೋ?"

إِنَّ ذَٰلِكَ لَحَقٌّ تَخَاصُمُ أَهْلِ النَّارِ ﴿٦٤﴾

64. ನಿಶ್ಚಯವಾಗಿಯೂ ಇದು ಸತ್ಯ. ನರಕವಾಸಿಗಳಲ್ಲಿ ಇದೇ ತರದ ಕಲಹಗಳಾಗಲಿಕ್ಕಿವೆ.

قُلْ إِنَّمَا أَنَا مُنْذِرٌ ۖ وَمَا مِنْ إِلَٰهٍ
إِلَّا اللَّهُ الْوَاحِدُ الْقَهَّارُ ﴿٦٥﴾

65. (ಪೈಗಂಬರರೇ) ಇವರೊಡನೆ ಹೇಳಿರಿ, ನಾನು ಕೇವಲ ಎಚ್ಚರಿಕೆ ಕೊಡುವವನು. ಏಕಮಾತ್ರನೂ ಅಜೇಯನೂ ಆಗಿರುವ ಅಲ್ಲಾಹನ ಹೊರತು ಇತರ ಯಥಾರ್ಥ ಆರಾಧ್ಯರಿಲ್ಲ.

رَبُّ السَّمَاوَاتِ وَالْأَرْضِ وَمَا بَيْنَهُمَا
الْعَزِيزُ الْغَفَّارُ ﴿٦٦﴾

66. ಅವನು ಭೂಮಿ- ಆಕಾಶಗಳ ಹಾಗೂ ಅವುಗಳ ನಡುವೆ ಇರುವ ಸಕಲ ವಸ್ತುಗಳ ಒಡೆಯನೂ ಪ್ರಬಲನೂ ಅತ್ಯಂತ ಕ್ಷಮಾ ಶೀಲನೂ ಆಗಿರುತ್ತಾನೆ.

قُلْ هُوَ نَبَأٌ عَظِيمٌ ﴿٦٧﴾

67. ಇವರೊಡನೆ ಹೇಳಿರಿ- ಇದೊಂದು ದೊಡ್ಡ ಸುದ್ದಿ-

أَنْتُمْ عَنْهُ مُعْرِضُونَ ﴿٦٨﴾

68. ಇದನ್ನು ಕೇಳಿ ನೀವು ವಿಮುಖರಾಗುತ್ತೀರಿ.

مَا كَانَ لِيَ مِنْ عِلْمٍ بِالْمَلَإِ الْأَعْلَىٰ
إِذْ يَخْتَصِمُونَ ﴿٦٩﴾

69. 'ಮಲಇಲ್ ಅಅ್‌ಲಾ'(ಸರ್ವೋನ್ನತ ದರಬಾರ)ದಲ್ಲಿ ವಾದ ವಿವಾದ ಗಳಾಗುತ್ತಿರುವಾಗಿನ ಸುದ್ದಿ ನನಗೆ ತಿಳಿದಿರಲೇ ಇಲ್ಲ.

إِنْ يُوحَىٰ إِلَيَّ إِلَّا أَنَّمَا أَنَا نَذِيرٌ مُبِينٌ ﴿٧٠﴾

70. ನಾನು ಸುಸ್ಪಷ್ಟ ಎಚ್ಚರಿಕೆ ಕೊಡುವವನಾಗಿರುವುದರಿಂದ ಮಾತ್ರ ನನಗೆ 'ದಿವ್ಯವಾಣಿ' ಮೂಲಕ ಈ ವಿಷಯಗಳನ್ನು ತಿಳಿಸ ಲಾಗುತ್ತದೆ."

71. ನಿಮ್ಮ ಪ್ರಭು ದೇವಚರರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ; "ನಾನು ಮಣ್ಣಿನಿಂದ ಒಬ್ಬ ಮಾನವನನ್ನು ಸೃಷ್ಟಿಸುವವನಿದ್ದೇನೆ.

إِذْ قَالَ رَبُّكَ لِلْمَلَٰٓئِكَةِ إِنِّىْ خَٰلِقٌۢ
بَشَرًا مِّنْ طِيْنٍ ﴿٧١﴾

72. ತರುವಾಯ ನಾನು ಅವನನ್ನು ಪೂರ್ಣವಾಗಿ ನಿರ್ಮಿಸಿದಾಗ ಮತ್ತು ಅವನೊಳಗೆ ನನ್ನ ಆತ್ಮವನ್ನು ಊದಿದಾಗ, ನೀವು ಅವನ ಮುಂದೆ ಸಾಷ್ಟಾಂಗವೆರಗಿ ಬಿಡಿರಿ."

فَإِذَا سَوَّيْتُهٗ وَنَفَخْتُ فِيْهِ مِنْ
رُّوْحِىْ فَقَعُوْا لَهٗ سٰجِدِيْنَ ﴿٧٢﴾

73. ಈ ಆಜ್ಞೆಯ ಪ್ರಕಾರ ದೇವಚರರೆಲ್ಲರೂ ಸಾಷ್ಟಾಂಗವೆರಗಿದರು-

فَسَجَدَ الْمَلٰٓئِكَةُ كُلُّهُمْ أَجْمَعُوْنَ ﴿٧٣﴾

74. ಆದರೆ ಇಬ್‌ಲೀಸನು ತನ್ನ ದೊಡ್ಡಸ್ತಿಕೆಯ ಅಹಂಭಾವ ಪ್ರಕಟಿಸಿದನು ಮತ್ತು ಅವನು ಸತ್ಯನಿಷೇಧಿಗಳಲ್ಲಾಗಿ ಬಿಟ್ಟನು.

إِلَّآ إِبْلِيْسَ ۗ اِسْتَكْبَرَ وَكَانَ
مِنَ الْكٰفِرِيْنَ ﴿٧٤﴾

75. ಆಗ ಅಲ್ಲಾಹನು, "ಇಬ್‌ಲೀಸ್! ನಾನು ನನ್ನೆರಡೂ ಕೈಗಳಿಂದ ನಿರ್ಮಿಸಿದಂತಹವನ ಮುಂದೆ ಸಾಷ್ಟಾಂಗವೆರಗುವುದರಿಂದ ಯಾವ ವಸ್ತು ನಿನ್ನನ್ನು ತಡೆಯಿತು? ನೀನು ಅಹಂಭಾವ ತೋರಿಸುವೆಯಾ? ಅಥವಾ ನೀನೇ ಉನ್ನತ ಮಟ್ಟದವರಲ್ಲಾಗಿರುವೆಯಾ?" ಎಂದು ಕೇಳಿದನು.

قَالَ يٰٓإِبْلِيْسُ مَا مَنَعَكَ أَنْ تَسْجُدَ
لِمَا خَلَقْتُ بِيَدَىَّ ۗ أَسْتَكْبَرْتَ
أَمْ كُنْتَ مِنَ الْعَالِيْنَ ﴿٧٥﴾

76. ಅವನು ಹೀಗೆ ಉತ್ತರ ಕೊಟ್ಟನು; "ನಾನು ಇವನಿಗಿಂತ ಶ್ರೇಷ್ಠನು, ನೀನು ನನ್ನನ್ನು ಅಗ್ನಿಯಿಂದ ಮತ್ತು ಇವನನ್ನು ಮಣ್ಣಿನಿಂದ ಸೃಷ್ಟಿಸಿರುವೆ."

قَالَ أَنَا خَيْرٌ مِّنْهُ ۗ خَلَقْتَنِىْ مِنْ
نَّارٍ وَّخَلَقْتَهٗ مِنْ طِيْنٍ ﴿٧٦﴾

77. ಆಗ (ಅಲ್ಲಾಹನು) ಹೇಳಿದನು, "ಸರಿ, ಹಾಗಾದರೆ ಇಲ್ಲಿಂದ ತೊಲಗು. ನೀನು ಧಿಕ್ಕರಿಸಲ್ಪಟ್ಟವನು.

قَالَ فَاخْرُجْ مِنْهَا فَإِنَّكَ رَجِيْمٌ ﴿٧٧﴾

78. ನಿರ್ಣಾಯಕ ದಿನದ ವರೆಗೂ ನಿನ್ನ ಮೇಲೆ ನನ್ನ ಅಭಿಶಾಪವಿದೆ."

وَّإِنَّ عَلَيْكَ لَعْنَتِىْٓ إِلٰى يَوْمِ الدِّيْنِ ﴿٧٨﴾

79. ಆಗ ಅವನು, "ಪ್ರಭೂ, ಹಾಗಿದ್ದರೆ ಈ ಜನರು ಪುನಃ ಎಬ್ಬಿಸಲ್ಪಡುವ ವರೆಗೆ ನನಗೆ ಕಾಲಾವಕಾಶ ಕೊಟ್ಟು ಬಿಡು" ಎಂದನು.

قَالَ رَبِّ فَأَنْظِرْنِىْٓ إِلٰى يَوْمِ يُبْعَثُوْنَ ﴿٧٩﴾

80. ಆಗ ಅಲ್ಲಾಹನು ಹೇಳಿದನು, "ಸರಿ, ನಿನಗೆ ಸಮಯಾವಕಾಶವಿದೆ-

قَالَ فَإِنَّكَ مِنَ الْمُنْظَرِيْنَ ﴿٨٠﴾

81. ನನಗೆ ತಿಳಿದಿರುವಂತಹ ಆ ದಿನದ ವರೆಗೆ."

إِلٰى يَوْمِ الْوَقْتِ الْمَعْلُوْمِ ﴿٨١﴾

82. ಆಗ ಅವನು ಹೇಳಿದನು, "ನಿನ್ನ ಪ್ರತಿಷ್ಠೆಯಾಣೆ! ಅವರೆಲ್ಲರನ್ನು ನಾನು ಖಂಡಿತವಾಗಿಯೂ ದಾರಿಗೆಡಿಸಿ ಬಿಡುವೆನು-

قَالَ فَبِعِزَّتِكَ لَأُغْوِيَنَّهُمْ أَجْمَعِينَ ﴿٨٢﴾

83. ನೀನು ಆರಿಸಿಕೊಂಡಿರುವ ನಿನ್ನ ದಾಸರ ಹೊರತು".

إِلَّا عِبَادَكَ مِنْهُمُ الْمُخْلَصِينَ ﴿٨٣﴾

84. "ಇದು ಸತ್ಯವಾಗಿದೆ ಮತ್ತು ನಾನು ಸತ್ಯವನ್ನೇ ಹೇಳುತ್ತೇನೆ" ಎಂದನು.

قَالَ فَالْحَقُّ وَالْحَقَّ أَقُولُ ﴿٨٤﴾

85. ಆಗ ಅಲ್ಲಾಹನು ಹೇಳಿದನು, "ನಾನು ನರಕವನ್ನು ನಿನ್ನಿಂದಲೂ ನಿನ್ನನ್ನು ಅನುಸರಿಸುವ ಸಕಲ ಮಾನವರಿಂದಲೂ ತುಂಬಿಸಿ ಬಿಡುವೆನು."

لَأَمْلَأَنَّ جَهَنَّمَ مِنْكَ وَمِمَّنْ تَبِعَكَ مِنْهُمْ أَجْمَعِينَ ﴿٨٥﴾

86. (ಸಂದೇಶವಾಹಕರೇ) ಇವರೊಡನೆ ಹೇಳಿರಿ; "ನಾನು ಈ ಸತ್ಯ ಪ್ರಚಾರಕ್ಕಾಗಿ ನಿಮ್ಮಿಂದ ಯಾವ ಪ್ರತಿಫಲವನ್ನೂ ಕೇಳುವುದಿಲ್ಲ. ನಾನು ಡಂಬಾಚಾರಿಗಳ ಪಾಲಿಗೆ ಸೇರಿದವನೂ ಅಲ್ಲ.

قُلْ مَا أَسْأَلُكُمْ عَلَيْهِ مِنْ أَجْرٍ وَمَا أَنَا مِنَ الْمُتَكَلِّفِينَ ﴿٨٦﴾

87. ಇದು ಸಕಲ ಲೋಕದವರಿಗಾಗಿ ಒಂದು ಉಪದೇಶವಾಗಿರುತ್ತದೆ.

إِنْ هُوَ إِلَّا ذِكْرٌ لِلْعَالَمِينَ ﴿٨٧﴾

88. ಮತ್ತು ಸ್ವಲ್ಪವೇ ಕಾಲ ಕಳೆದಾಗ ನಿಮಗೆ ಇದರ ವಾಸ್ತವಿಕತೆಯು ತಾನಾಗಿಯೇ ತಿಳಿಯುವುದು."

وَلَتَعْلَمُنَّ نَبَأَهُ بَعْدَ حِينٍ ﴿٨٨﴾